# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 768 |
| ಮಾನ್ಯ ಸದಸ್ಯರ ಹೆಸರು | ಡಾ: ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದ್ದವರು) |
| ಉತ್ತರಿಸುವ ಸಚಿವರು | ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | 16.12.2024 |

| | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದ ಸರ್ಕಾರಿ ವಿಶ್ವವಿದ್ಯಾಲಯಗಳು ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಏಕೀಕೃತ ಯುಯುಸಿಎಂಎಸ್ ಪದ್ಧತಿಯಿಂದ ಪದವಿ/ ಸ್ನಾತಕೋತ್ತರ ಪರೀಕ್ಷೆಗಳ ಫಲಿತಾಂಶ ವಿಳಂಬ, ಅಂಕಪಟ್ಟಿಗಳಲ್ಲಿ ಅಂಕಗಳು ಇಲ್ಲದಿರುವುದು ಮತ್ತು ಅಂಕಪಟ್ಟಿಗಳೇ ಲಭ್ಯವಾಗದಂತಹ ಸಮಸ್ಯೆಗಳಿಗೆ ಯಾವ ಸುಧಾರಣಾ ಕ್ರಮಗಳನ್ನು ಕೈಗೊಳ್ಳಲಾಗಿದೆ; | ರಾಜ್ಯದ ಎಲ್ಲಾ ಸಾರ್ವಜನಿಕ ವಿಶ್ವವಿದ್ಯಾಲಯಗಳು 2022ನೇ ಶೈಕ್ಷಣಿಕ ಸಾಲಿನಿಂದ ವಿದ್ಯಾರ್ಥಿಗಳ ಪ್ರವೇಶಾತಿ, ಪರೀಕ್ಷೆ, ಫಲಿತಾಂಶ, ಅಂಕಪಟ್ಟಿ, ಪದವಿಪ್ರಮಾಣಪತ್ರ ಇತ್ಯಾದಿ ಶೈಕ್ಷಣಿಕ ಚಟುವಟಿಕೆಗಳನ್ನು ಏಕೀಕೃತ ಯುಯುಸಿಎಂಎಸ್ ಪದ್ಧತಿ ಮೂಲಕ ಕೈಗೊಳ್ಳಲಾಗುತ್ತಿದೆ.<br><br>NAD-DigiLocker ಮೂಲಕ ಸೆಮಿಸ್ಟರ್ ಪ್ರಕಾರದ ಅಂಕಪಟ್ಟಿಗಳನ್ನು ಅಪ್ ಲೋಡ್ ಮಾಡಲು UUCMS ನಲ್ಲಿ ಇಂಟರ್‌ಫೇಸ್ ರಚಿಸಲಾಗಿದ್ದು, ಫಲಿತಾಂಶಗಳನ್ನು ಮತ್ತು ಪ್ರಮಾಣ ಪತ್ರಗಳನ್ನು 24 ಘಂಟೆಗಳಿಗಿಂತ ಹೆಚ್ಚು ಸಮಯ ತೆಗೆದುಕೊಳ್ಳದೇ ಅಪ್‌ಲೋಡ್ ಮಾಡುವುದು ತಡೆರಹಿತವಾಗಿರುತ್ತದೆ. |
| (ಆ) | ಡಿಜಿಟಲ್ ವ್ಯವಸ್ಥೆ ಅಳವಡಿಸಬೇಕು ಎಂದು ವಿಶ್ವವಿದ್ಯಾಲಯದಲ್ಲಿ ಯಾವುದೇ ಪೂರ್ವ ಸಿದ್ಧತೆಯಿಲ್ಲದೆ ಜಾರಿಗೊಳಿಸಿರುವುದು ಸಮಂಜಸವೆ; ಈ ಕ್ರಮದಿಂದ ವಿದ್ಯಾರ್ಥಿಗಳ ಭವಿಷ್ಯ ಹಾಳು ಮಾಡಿದಂತಲ್ಲವೇ; | ಶಿಕ್ಷಣ ಕ್ಷೇತ್ರದಲ್ಲಿ ಆಡಳಿತಾತ್ಮಕ ಮತ್ತು ಶೈಕ್ಷಣಿಕ ಸುಧಾರಣೆಗಳನ್ನು ತರಲು ಹಾಗೂ ಮಾಹಿತಿ ತಂತ್ರಜ್ಞಾನದ ಬಳಕೆಯ ಮೂಲಕ ಸಮರ್ಥ ಸೇವೆಗಳನ್ನು ತಲುಪಿಸಲು ಭಾರತ ಸರ್ಕಾರವು ಶೈಕ್ಷಣಿಕ ಪ್ರಶಸ್ತಿಗಳ ಡಿಜಿಟಲ್ ಡಿಪಾಸಿಟರಿಯ National Academic Depository (NAD) ಸಂಸ್ಥೆಯನ್ನು ದಿನಾಂಕ:09.07.2017ರಲ್ಲಿ ಸ್ಥಾಪಿಸಿರುತ್ತದೆ.<br><br>ಭಾರತ ಸರ್ಕಾರವು ತಮ್ಮ ಪತ್ರ ಸಂಖ್ಯೆ: F.No-5-3/2016-U-Policy, Dated:31.10.2016ರನ್ವಯ NAD ಯೋಜನೆಯ ಅನುಷ್ಠಾನಕ್ಕಾಗಿ UGC ಯನ್ನು ಅಧಿಕೃತ ಸಂಸ್ಥೆಯಾಗಿ ಗೊತ್ತುಪಡಿಸಿರುತ್ತದೆ. UGC ಯು NAD ಪ್ರಾರಂಭವಾದಾಗಿನಿಂದ ವಿವಿಧ ಕೇಂದ್ರಿಯ ವಿಶ್ವವಿದ್ಯಾಲಯಗಳು, ರಾಜ್ಯ ವಿಶ್ವವಿದ್ಯಾಲಯಗಳು, ಖಾಸಗಿ ವಿಶ್ವವಿದ್ಯಾಲಯಗಳು, ಕೇಂದ್ರಿಯ ಉನ್ನತ ಶಿಕ್ಷಣ ಸಂಸ್ಥೆಗಳು, ಶಾಲಾ ಮಂಡಳಿಗಳು ಸೇರಿದಂತೆ ಅನೇಕ ಶೈಕ್ಷಣಿಕ ಸಂಸ್ಥೆಗಳು NAD ನಲ್ಲಿ ವಿದ್ಯಾರ್ಥಿಗಳ ಅಂಕಪಟ್ಟಿ ಮತ್ತು ಪ್ರಮಾಣ ಪತ್ರಗಳನ್ನು ಡಿಜಿಟಲ್ ಪ್ರತಿಗಳನ್ನು NAD ಮತ್ತು DigiLocker ನಲ್ಲಿ ಅಪ್ ಲೋಡ್ / ಶೇಖರಿಸಲು ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಿಗೆ ಸೂಚನೆ ನೀಡಿರುತ್ತದೆ.<br><br>ಯುಜಿಸಿಯ ನಿರ್ದೇಶನದನುಸಾರ ರಾಜ್ಯ ಸರ್ಕಾರವು 2023-24ನೇ ಶೈಕ್ಷಣಿಕ ಸಾಲಿನಿಂದ ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿನ ಅಧೀನ ಇಲಾಖೆಗಳು, ಸಾರ್ವಜನಿಕ ವಿಶ್ವವಿದ್ಯಾಲಯಗಳು ಹಾಗೂ ಎಲ್ಲಾ ಶೈಕ್ಷಣಿಕ ಸಂಸ್ಥೆಗಳು |

| | | |
|---|---|---|
| | | ಪದವಿ ಮತ್ತು ಸ್ನಾತಕೋತ್ತರ ಪದವಿ ಅಂಕಪಟ್ಟಿಗಳು, ಪ್ರಮಾಣ ಪತ್ರಗಳು ಮತ್ತು ಇತರೆ ಶೈಕ್ಷಣಿಕ ದಾಖಲೆಗಳನ್ನು NAD- DigiLocker ನಲ್ಲಿ ಡಿಜಿಟಲ್ ರೂಪದಲ್ಲಿ ಕಡ್ಡಾಯವಾಗಿ ಸಂಗ್ರಹಿಸಿಡಲು, ಉನ್ನತ ಶಿಕ್ಷಣದ ವಿದ್ಯಾರ್ಥಿಗಳು ಸದರಿ ಅಂಕಪಟ್ಟಿಗಳ Credits ಗಳನ್ನು Academic Bank of Credit (ABC) ನಲ್ಲಿ ಕಡ್ಡಾಯವಾಗಿ ನೊಂದಾಯಿಸಿಕೊಳ್ಳಲು ನಿರ್ದೇಶನ ನೀಡಲಾಗಿದೆ. |
| (ಇ) | ಪದವಿ ಪೂರೈಸಿದರೂ ಪದವಿಯು ಇಲ್ಲದ ಅಂಕಪಟ್ಟಿಯು ಇಲ್ಲದೇ ಉದ್ಯೋಗಕ್ಕೆ ಅರ್ಜಿ ಹಾಕಲು ಅತಂತ್ರ ಸ್ಥಿತಿ ನಿರ್ಮಾಣ ಮಾಡಿರುವ ಈ ವ್ಯವಸ್ಥೆಯನ್ನು ಹೇಗೆ ಸರಿಪಡಿಸಲಾಗುವುದು; (ವಿವರ ನೀಡುವುದು) | ವಿವಿಧ ನೇಮಕಾತಿ ಪ್ರಾಧಿಕಾರಗಳು/ ಸಂಸ್ಥೆಗಳು ನೇಮಕಾತಿ ಸಮಯದಲ್ಲಿ NAD-DigiLocker ನಲ್ಲಿನ ಅಂಕಪಟ್ಟಿ ಹಾಗೂ ಪ್ರಮಾಣ ಪತ್ರಗಳನ್ನು ದೃಢೀಕೃತವೆಂದು ಪರಿಗಣಿಸುವಂತೆ ಸರ್ಕಾರದ ಆದೇಶ ಸಂಖ್ಯೆ: ಇಡಿ 29 ಇಜಿಒವಿ 2023, ದಿನಾಂಕ:16.10.2023ರಂದು ಆದೇಶ ಹೊರಡಿಸಲಾಗಿದೆ. |
| (ಈ) | ಅವ್ಯವಸ್ಥೆ ಆಗರವಾಗಿರುವ ವಿಶ್ವವಿದ್ಯಾಲಯಗಳ ಪರಿಸರದಲ್ಲಿ ಇಂತಹದೊಂದು ಪರಿಸ್ಥಿತಿ ನಿರ್ಮಾಣದಿಂದ ಉನ್ನತ ಶಿಕ್ಷಣ ಕುರಿತು ವಿದ್ಯಾರ್ಥಿಗಳಲ್ಲಿ ಪಾಲಕರಲ್ಲಿ ವಿಶ್ವಾಸ ಮತ್ತು ಗುಣಮಟ್ಟ ಕಡಿಮೆಯಾಗಿರುವುದು ಇದನ್ನು ಸುಧಾರಿಸಲು ಕೈಗೊಳ್ಳುವ ಕ್ರಮವೇನು? | ಉದ್ಭವಿಸುವುದಿಲ್ಲ. |

ಸಂಖ್ಯೆ: ಇಡಿ 248 ಯುಎನ್ಇ 2024

(ಡಾ: ಎಂ.ಸಿ ಸುಧಾಕರ್)
ಉನ್ನತ ಶಿಕ್ಷಣ ಸಚಿವರು